**ಇಂಗ್ಲಿಷ್ ಮೂಲ: ಸಾಮರ್ಸೆಟ್ ಮಾಮ್**
**ಕನ್ನಡಕ್ಕೆ: ಕೆ. ಪದ್ಮಾಕ್ಷಿ**

ಕಲೆ: ಮುರಳೀಧರ ರಾಥೋಡ್

# ಕನಸು

1917ರ ಆಗಸ್ಟ್‌ನಲ್ಲಿ ನಾನು ಮಾಡುತ್ತಿದ್ದ ಉದ್ಯೋಗದ ಸಲುವಾಗಿ ನ್ಯೂಯಾರ್ಕ್‌ನಿಂದ ಪೆಟ್ರೋಗ್ರಾಡ್‌ಗೆ ಹೋಗಬೇಕಾದ ಸಂದರ್ಭ ಬಂತು. ಸುರಕ್ಷತೆಯ ದೃಷ್ಟಿಯಿಂದ ನನಗೆ ವ್ಲಾಡಿವಾಸ್ಟಾಕ್ ಮೂಲಕವೇ ಪ್ರಯಾಣ ಮಾಡಲು ತಿಳಿಸಲಾಗಿತ್ತು. ಅಲ್ಲಿಗೆ ತಲುಪಿದಾಗ ಬೆಳಗಾಗಿತ್ತು. ಮಾಡಲು ಏನೂ ಕೆಲಸವಿಲ್ಲದ್ದರಿಂದ ನಾನು ಸಮಯವನ್ನು ಎಷ್ಟು ಚೆನ್ನಾಗಿ ಕಳೆಯಲು ಸಾಧ್ಯವೋ ಅಷ್ಟು ಚೆನ್ನಾಗಿ ಕಳೆದೆ. ನನಗೆ ನೆನಪಿರುವಂತೆ ರಾತ್ರಿ ಒಂಬತ್ತಕ್ಕೆ ಟ್ರಾನ್ಸ್–ಸೈಬೀರಿಯನ್ ರೈಲು ಹೊರಡಲಿತ್ತು. ರೈಲ್ವೇ ನಿಲ್ದಾಣದ ಉಪಾಹಾರಗೃಹದಲ್ಲಿ ನನ್ನ ಪಾಡಿಗೆ ನಾನು ಊಟಮಾಡಿದೆ. ಅಲ್ಲಿ ತುಂಬಾ ಜನಜಂಗುಳಿ ಇದ್ದುದರಿಂದ ಒಂದು ಸಣ್ಣ ಮೇಜನ್ನು ನಾನು ಇನ್ನೊಬ್ಬನೊಡನೆ ಹಂಚಿಕೊಳ್ಳಬೇಕಾಯಿತು. ಆ ಮನುಷ್ಯನ ಮುಖಚರ್ಯೆ, ಆಕೃತಿ ನನ್ನನ್ನು ಸೆಳೆಯಿತು. ಅವನು ರಷ್ಯನ್, ಎತ್ತರವಾದ ವ್ಯಕ್ತಿ, ಆಶ್ಚರ್ಯಪಡುವಷ್ಟು ಬಲಿಷ್ಠನಾಗಿದ್ದ, ಅವನ ಹೊಟ್ಟೆ ಗುಡಾಣದಂತಿತ್ತು. ಹಾಗಾಗಿ ಅವನು ಮೇಜಿನಿಂದ ಸಾಕಷ್ಟು ದೂರವೇ ಕುಳಿತುಕೊಳ್ಳುವಂತಾಗಿತ್ತು. ಅವನ ದೇಹದ ಗಾತ್ರಕ್ಕೆ ಅವನ ಕೈಗಳು ಚಿಕ್ಕದಾಗಿ ಕಾಣುತ್ತಿದ್ದವು ಮತ್ತು ಆ ಕೈಗಳು ಆತನ ದೇಹದ ಬೊಜ್ಜಿನ ಮಡಿಕೆಗಳಲ್ಲಿ ಹೂತುಹೋಗಿದ್ದವು. ಅವನ ಕೂದಲು ಉದ್ದವಾಗಿ, ಕಪ್ಪಾಗಿ, ತೆಳುವಾಗಿತ್ತು. ಬೊಕ್ಕತಲೆಯನ್ನು ಅಡಗಿಸುವ ಸಲುವಾಗಿ ಕೂದಲನ್ನು ತುಂಬಾ ಜಾಗರೂಕತೆಯಿಂದ ನೆತ್ತಿಯ ಮೇಲೆ ಬಾಚಲಾಗಿತ್ತು. ಅವನದು ಚಪ್ಪಟೆ ಮುಖ. ಕತ್ತಿನ ಭಾಗ ದಪ್ಪವಾಗಿ ಎರಡೆರಡು ಗದ್ದ ಕಾಣುತ್ತಿತ್ತು. ಕೆನ್ನೆಗಳನ್ನು ನುಣುಪಾಗಿ ಕ್ಷೌರ ಮಾಡಿದ್ದ, ಒಂಥರಾ ಬೋಳು ಬೋಳಾಗಿ ಅಸಹ್ಯವಾಗಿ ಕಾಣುತಿದ್ದ. ಅವನ ಮೂಗು ಚಿಕ್ಕದಾಗಿತ್ತು, ಆ ಮೂಗು ಮಾಂಸದ ಮುದ್ದೆಯ ನಡುವೆ ಒಂದು ಸಣ್ಣ ಬಟನ್ನಿನಂತೆ ಒಂಥರಾ ತಮಾಷೆಯಾಗಿ ಕಾಣುತ್ತಿತ್ತು. ಅವನ ಹೊಳೆಯುವ ಕಪ್ಪು ಕಣ್ಣುಗಳೂ ಸಹ ಚಿಕ್ಕದಾಗಿದ್ದವು. ಅವನ ಬಾಯಿ ದೊಡ್ಡದಾಗಿ, ಕೆಂಪಾಗಿದ್ದು, ಲೋಲುಪತೆಯನ್ನು ತೋರಿಸುತ್ತಿತ್ತು. ಅವನು ಕಪ್ಪು ಸೂಟ್ ಧರಿಸಿದ್ದ. ಅದೇನೂ ಸವೆದು ಹಾಳಾಗಿರಲಿಲ್ಲ, ಆದರೆ ಅಸ್ತವ್ಯಸ್ತವಾಗಿ ಕೊಳಕಾಗಿತ್ತು; ಆ ಸೂಟ್ ಯಾವಾಗ ಅವನ ಹತ್ತಿರ ಬಂತೋ ಅವತ್ತಿನಿಂದ ಅದಕ್ಕೆ ಇಸ್ತ್ರಿಯನ್ನೂ ಮಾಡಿಲ್ಲ, ಅಲ್ಲದೆ ಒಗೆದು ಸ್ವಚ್ಛ ಮಾಡಿಲ್ಲ ಎಂಬಂತೆ ಕಾಣುತ್ತಿತ್ತು.

ಆ ಹೋಟೆಲಿನಲ್ಲಿ ಸೇವೆ ಬಹಳ ಕಳಪೆಯಾಗಿತ್ತು. ವೇಯ್ಟರನ ಗಮನ ಸೆಳೆಯುವುದು ಅಸಾಧ್ಯವೇ ಆಗಿತ್ತು. ಬಹಳ ಬೇಗ ನಾವು ಮಾತಾಡಲು ಶುರು ಮಾಡಿದೆವು. ಆ ರಷ್ಯನ್ ಇಂಗ್ಲಿಷ್‌ನಲ್ಲಿ ಚೆನ್ನಾಗಿ ನಿರರ್ಗಳವಾಗಿ ಮಾತಾಡುತ್ತಿದ್ದ. ಅವನ ಉಚ್ಚಾರಣೆ ವಿಶೇಷವಾಗಿತ್ತು. ಆದರೆ,